<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>
<u>ಸಿಸಿ ನಂಬರ್**418/2018**</u>

<u>ಫಿರ್ಯಾದಿ</u>		ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ಧ

<u>ಆರೋಪಿಃ</u>		**1.**ದಾದಾಪೀರ ತಂದೆ ಮರ್ದಾನಸಾಬ ಬುಷಿ
ವಯಾಃ **47** ವರ್ಷ**,** ಉದ್ಯೋಗಃ ಕೃಷಿ
ಸಾಃ ಬ್ಯಾಡಗಿ ತಾಃಬ್ಯಾಡಗಿ ಜಿಃ ಹಾವೇರಿ

**2.** ಆನಂದ  ಹರಿಜನ
ಸಾಃ ಹೊಸಳ್ಳಿ ತಾಃ  ಹಿರೇಕೆರೂರ ಜಿಃ ಹಾವೇರಿ

**:<u>ದೋಷಾರೋಪಣೆ:</u>**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ  ನಿನ್ನ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಮೊದಲನೇಯದಾಗಿ  ಪಿರ್ಯದಿಯು ಪುರಾಣ ಪ್ರವಚನ ಅದ್ವೈತ ಸಿದ್ಧಾಂತ ವಾಸ್ತು ಶಾಸ್ತ್ರಗಳ ವಿಷಯಗಳ ಬಗ್ಗೆ ಧರ್ಮ ಉಪದೇಶ ಮಾಡಿ ಅವುಗಳ ಮೂಲಕ ಭಕ್ತರಿಗೆ ಉಪದೇಶವನ್ನು ನೀಡುತ್ತಾ ಭಕ್ತರು ಕೊಟ್ಟ ಕಾಣಿಕೆಗಳನ್ನು ಸ್ವೀಕರಿಸಿ ಆಶ್ರಮ ಹಾಗೂ ಗೋಶಾಲೆ ಕಟ್ಟುವ ಉದ್ದೇಶದಿಂದಾ ಒಟ್ಟು ಒಂದು ಕೋಟಿ ರೂಪಾಯಿ ಜಮೆ ಮಾಡಿದ್ದು ಧಾರ್ಮಿಕ ಆಶ್ರಮ ಕಟ್ಟಲು ಹಾವೇರಿ ಶಹರದ ಸುತ್ತಮುತ್ತಲೂ ಸೂಕ್ತ ಜಾಗೆಯನ್ನು ಹುಡಿಕುತ್ತಿರುವಾಗ 1 ನೇ ಆರೋಪಿಯಾದ ನೀನು ಪಿರ್ಯಾದಿ ಪರಿಚಯ ಮಾಡಿಕೊಂಡು ಆರೋಪಿಯು ಸೂಕ್ತ ಜಾಗೆಯನ್ನು ಕೊಡಿಸುವದಾಗಿ  ನಂಬಿಕೆ ಬರುವ ಹಾಗೆ ನಂಬಸಿಸಿ ತುರ್ತಾಗಿ ನನಗೆ ಒಂದು ಕೊಟಿ ರೂಪಾಯಿ ಬೇಕಾಗುತ್ತದೆ ಅಂತಾ ಆರೋಪಿಯು ಪಿರ್ಯಾದಿಗೆ ಕೇಳಿ ಒಂದು ವೇಳೆ ಹಣವನ್ನು ಕೊಡದೇ ಹೋದರೆ ಬ್ಯಾಡಗಿಯಲ್ಲಿ ಆರೋಪಿಯು ಪಿರ್ಯಾದಿಗೆ ಮತ್ತು ಪಿರ್ಯಾದಿ ತಮ್ಮ ಲಿಂಗರಾಜ ಇವರಿಗೆ ತೋರಿಸಿ ನಂಬಿಕೆ ಬುರವ ಹಾಗೇ ಮಾಡಿ ಹಣವನ್ನು ಕೊಡದೇ ಹೋದರೇ ಈ ಆಸ್ತಿಗಳನ್ನು ಪಿರ್ಯಾದಿಯ ಹೆಸರಿಗೆ ಮಾಡಿಕೊಡುವದಾಗಿ ವಂಚಿಸಿ ಪಿರ್ಯಾದಿಯಿಂದಾ ದಿನಾಂಕಃ 18.11.2016 ರಂದು ಬೆಳಿಗ್ಗ 9-30 ಗಂಟೆ ಸುಮಾರಿಗೆ ಈ ಪ್ರಕರಣದಲ್ಲಿಯ

ಆರೋಪಿಯಾದ ದಾದಾಪೀರ ಇತನು ತನ್ನ ಕಾರ ನಂಬರಃ ಕೆಎ-27/ಎಂ-5689 ನೇದ್ದರಲ್ಲಿ ಪಿರ್ಯಾದಿಯ ಮನೆಗೆ ಒಂದು ಕರಿ ಬ್ಯಾಂಗನ್ನು ಹಿಡಿದುಕೊಂಡು ಪಿರ್ಯಾದಿ ಮನೆಯೊಳಗೆ ಹೋಗಿ ಪಿರ್ಯಾದಿಯಿಂದಾ ಒಂದು ಕೋಟಿ ಹಣವನ್ನು ಪಡೆದುಕೊಂಡು ಪುನಃ ಕಾರಿನಲ್ಲಿ ಹೋಗಿ ಅದೇ ದಿನ 1 ನೇ ಆರೋಪಿಯಾದ ನೀನು ನಿನ್ನ ಮಗನಾದ ಶಾಹೀಲ್ ಇತನ ಬ್ಯಾಡಗಿ ಯುನಿಯನ್ ಬ್ಯಾಂಕ ಖಾತೆಯಿಂದ ಆರ್.ಟಿ.ಜಿಪಿ.ಎಸ್ ಮೂಲಕ 15 ಲಕ್ಷ ರೂಪಗಳನ್ನು ಪರ್ಯಾದಿಯ ತಮ್ಮ ಲಿಂಗರಾಜ ಇತನ ಹಿರೇಕೆರೂರ ಸಿಂಡಿಕೇಟ್ ಬ್ಯಾಂಕ ಖಾತೆಗೆ ಜಮಾ ಮಾಡಿದ್ದು ಮುಂದೆ 2-3 ದಿವಸ ಕಳೆದ ನಂತರ ಪಿರ್ಯಾದಿ ಮತ್ತು ಪಿರ್ಯಾದಿ ತಮ್ಮ ಲಿಂಗರಾಜ ಕೂಡಿ ಉಳಿದ ಹಣವನ್ನು 1 ನೇ ಆರೋಪಿಯಾದ ನಿನಗೆ ಕೇಳಲು ಬಂದಾಗ 1 ನೇ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಪಿರ್ಯಾದಿ ತಮ್ಮನಿಗೆ ಹಣವನ್ನು ನೀವು ಕೊಟ್ಟಿಲ್ಲಾ ಎಂದು ಬೇಜವಾಬ್ದಾರಿಕೆ ಹೇಳಿಕೆ ನೀಡಿದ್ದು ಮತ್ತೆ 3-4 ದಿವಸ ಬಿಟ್ಟು ಪಿರ್ಯಾದಿ ಮತ್ತು ಪರ್ಯಾದಿ ತಮ್ಮ ಲಿಂಗರಾಜ ಹಾಗೂ ಪಿರ್ಯಾದಿಯ ಭಕ್ತರ ಕೂಡಿ 1 ನೇ ಆರೋಪಿಯಾದ ನಿನ್ನ ಮನೆಯ ಮುಂದೆ ಸತ್ಯಾಗ್ರಹ ಕುಳಿತಾಗ 1 ನೇ ಆರೋಪಿಯಾದ ನೀನು ನಿನಗೆ ಬೇಕಾದ ವ್ಯಕ್ತಿಯಾದ 2 ನೇ ಆರೋಪಿಗೆ ವಂಚನೆ ಮಾಡಿದ ಹಣದಲ್ಲಿ ಸ್ವಲ್ಪ ಹಣವನ್ನು ಕೊಟ್ಟು ಸತ್ಯಾಗ್ರಹವನ್ನು ಇಲ್ಲಿಗೆ ನಿಲ್ಲಿಸುವಂತೆ ಹೇಳಿದ್ದು ಮತ್ತು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಪಿರ್ಯಾದಿಗೆ ಆಶ್ರಮ ಕಟ್ಟಿ ಕೊಡಲು ಸೂಕ್ತ ಜಾಗೆ ಕೊಡಿಸುವದಾಗಿ ನಂಬಿಸಿ ಒಂದು ಕೋಟಿ ರೂ ಹಣವನ್ನು ಪಡೆದು ಒಂದು ಕೋಟಿ ಹಣದಲ್ಲಿ ರೂ.15 ಲಕ್ಷಗಳನ್ನು ಮರಳಿ ಬ್ಯಾಂಕ ಮೂಲಕ ಪಿರ್ಯಾದಿ ತಮ್ಮನಿಗೆ ಹಾಕಿ ಉಳಿದ 85 ಲಕ್ಷ ರೂ ಹಣವನ್ನು ಪಿರ್ಯಾದಿಗೆ ಮರಳಿ ಕೊಡದೇ ಮೋಸ ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***420*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ?

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ , ದಿನಾಂಕ ಹಾಗೂ ಸಮಯದಂದು ಪಿರ್ಯಾದಿಗೆ ಮತ್ತು ಪಿರ್ಯಾದಿಯ ಅವಾಚ್ಯ ಶಬ್ದಗಳಿಂದ ಬೈದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***504*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ , ದಿನಾಂಕ ಹಾಗೂ ಸಮಯದಂದು ಪಿರ್ಯಾದಿಗೆ ಮತ್ತು ಪಿರ್ಯಾದಿಯ ತಮ್ಮನಿಗೆ ಜೀವದ ಬೆದರಿಕೆ ಹಾಕಿದ್ದು , ಕಾರಣ ಭಾರತೀಯ ದಂಡ ಸಂಹಿತೆ ಕಲಂ ***506*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1 ನೇ ಆರೋಪಿಯಾದ ನೀನು 2 ನೇ ಆರೋಪಿಗೆ ವಂಚನೆ ಮಾಡಿದ ಹಣದಲ್ಲಿ ಸವಲ್ಪ ಹಣವನ್ನು ಕೊಟ್ಟು ಪಿರ್ಯಾದಿಗೆ ಈ ಸತ್ಯಾಗ್ರುವನ್ನು ಇಲ್ಲಿಗೆ ನಿಲ್ಲಿಸು ಅಂತಾ ಹೇಳಲು ಹೇಳಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ ***109*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿ: 24.10.2025.

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್ 418/2018**
**ದಿನಾಂಕಃ 24.10.2025**

ಫಿರ್ಯಾದಿ ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ಧ

ಆರೋಪಿ **1.**ದಾದಾಪೀರ ತಂದೆ ಮರ್ದಾನಸಾಬ ಬುಷಿ
ವಯಾಃ **47** ವರ್ಷ, ಉದ್ಯೋಗಃ ಕೃಷಿ
ಸಾಃ ಬ್ಯಾಡಗಿ ತಾಃಬ್ಯಾಡಗಿ ಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯಸಹಿ:

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **418/2018**
ದಿನಾಂಕಃ **24.10.2025**

ಫಿರ್ಯಾದಿ ಸರಕಾರ **(**ಹಾವೇರಿ ಶಹರ ಪೊಲೀಸ ಠಾಣೆ**).**

ವಿರುದ್ಧ

ಆರೋಪಿ **2.** ಆನಂದ ಹರಿಜನ
ಸಾಃ ಹೊಸಳ್ಳಿ ತಾಃ ಹಿರೇಕೆರೂರ ಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯಸಹಿ: